ಮಾಹಿತಿಗೆ ಅಂತ ತೆಗೆದುಕೊಂಡ ಸ್ನಾಪ್‌ಶಾಟ್‌ಗಳು ತುಂಬಿ ತುಳುಕುತ್ತಿದ್ದವು. ಸೆಲ್ಫೀ ಮತ್ತು ನನ್ನ ಬೇರೆ ಫೋಟೊಗಳನ್ನು ಹೋಲಿಸಿ ನೋಡಿದಾಗ ನನಗನಿಸಿದ್ದು,

ಸೆಲ್ಫೀ ಉಳ್ಳವರ ಮುಖವು ಮುದ್ದು ಬರುವಂತಿಕ್ಕು
ಸೆಲ್ಫೀಯಿಲ್ಲದವರ ಬರಿ ಮುಖವು ಹಾಳೂರು
ಹದ್ದಿನಂತಿಕ್ಕು||

ಹಾಗಾಗಿ ಪ್ರೆಶಿಯಸ್ ಸೆಲ್ಫೀ ಡಿಲಿಟ್ ಮಾಡೋದು ಬೇಡ ಅನಿಸಿ, ಬೇರೆಯವರ ಕಡೆ ಕ್ಲಿಕ್ಕಿಸಿಕೊಂಡ ನನ್ನದೇ ಫೋಟೊಗಳ ಕಡೆ ದೃಷ್ಟಿ ಹರಿಸಿದೆ. ಅಯ್ಯೋ! ನಾವು ಸೆಲ್ಫೀ ಅಷ್ಟು ಸುಂದರ ಅಲ್ಲ ಅಂತ ಇವ್ಳು ನಮ್ಮನ್ನ ಡಸ್ಟ್‌ಬಿನ್‌ಗೆ ಹಾಕಿಬಿಡ್ತಾಳೆ ಅಂತ ಹೆದರಿ ಕಂಗಾಲಾಗಿ ಕುಳಿತ ನನ್ನ ಫೋಟೊಗಳನ್ನು ನೋಡಿ ಅಯ್ಯೋ ಪಾಪ ಅನಿಸಿಬಿಟ್ಟಿತು.



ಆದ್ರೆ ಒಂದೊಂದು ಸಲ ಪ್ರಾಕ್ಟಿಕಲ್ ಆಗಿ ವಿಚಾರ ಮಾಡಬೇಕು, ಇದು ನಮ್ಮ ಟ್ಯಾಬ್ ಮೆಮೊರಿಗೆ ಒಳ್ಳೆಯದು. ಇನ್ನೇನು ಆ ಫೋಟೊಗಳನ್ನು ಸೆಲೆಕ್ಟ್ ಮಾಡಬೇಕು, ಅಷ್ಟರಲ್ಲಿ ತಲೇಲಿ ಥಟ್ಟನೆ ಒಂದು ವಿಚಾರ ಬಂತು. **'Picture is worth a thousand words but Memory is priceless'** ಅಂತ ಅನಿಸಿ ಅದನ್ನೂ ಡಸ್ಟ್‌ಬಿನ್‌ಗೆ ಹಾಕುವ ವಿಚಾರ ಕೈ ಬಿಟ್ಟೆ. ಅಬ್ಬಾ! ಬದುಕಿದೆಯಾ ಬಡಜೀವವೇ ಅಂತ ಸೆಲೆಕ್ಟ್ ಆದ ಫೋಟೊಗಳೆಲ್ಲ ನಿಟ್ಟುಸಿರುಬಿಟ್ಟವು.

ಆ ಮೆಮೊರಿಗಳನ್ನೆಲ್ಲ (ಸೆಲ್ಫೀ, ನಾನ್‌ಸೆಲ್ಫೀ) ಬೇರೆ ಕಡೆಗೆ ಸಾಗಿಸಲು ಟೆರಾಬೈಟ್‌ಗಳಷ್ಟು ವಿಸ್ತಾರವಾದ ಒನ್ ಡ್ರೈವ್ ಎಂಬ ಡಸ್ಟ್‌ಬಿನ್ ಅಂತೂ ಇದ್ದೇ ಇದೆ. ಹಾಗಾಗಿ ಆ ಎಲ್ಲ ಫೋಟೊಗಳನ್ನು ಶಾಶ್ವತವಾಗಿ ಕಸಕ್ಕೆ ಹಾಕುವ ಬದಲು ಒನ್ ಡ್ರೈವ್‌ಗೆ ಸಾಗಿಸಿ ನನ್ನ ಟ್ಯಾಬ್ ಮೆಮೊರಿ ಸ್ಪೇಸ್ ಸ್ವಚ್ಛ ಮಾಡಿದೆ. ಆಮೇಲೆ ನನ್ನ ಸ್ವಚ್ಛತಾ ಪಯಣ ಆಡಿಯೋಸ್ ಎಂಬ ಅಡುಗೆಮನೆ ಕಡೆಗೆ ಸಾಗಿತು. ಅಲ್ಲಿ ನಿನ್ನೆ, ಮೊನ್ನೆ, ಎಷ್ಟೋ ತಿಂಗಳುಗಳು, ಎಷ್ಟೋ ವರ್ಷಗಳ ಹಿಂದೆ ಯಾರ್‍ಯಾರೋ ಜೊತೆ ಮಾತನಾಡಿದ ಸುದ್ದಿಯ ತುಣುಕುಗಳು ಕಂಡವು. ನಿನ್ನೆಯ ಸುದ್ದಿ ನಾಳೆಗೆ ರದ್ದಿ, ಹಾಗಾಗಿ ಆ ಸುದ್ದಿಗಳೆಲ್ಲ ಡಸ್ಟ್‌ಬಿನ್ ಪಾಲಾದವು.

ಮುಂದೆ ಡೌನ್‌ಲೋಡ್ಸ್ ಎಂಬ ಡೈನಿಂಗ್ ರೂಂಗೆ ಲಗ್ಗೆ ಹಾಕಿದೆ. ಅಡುಗೆಮನೆ ಪೂರ್ಣ ಸಂಸಾರ ಡೈನಿಂಗ್ ಟೇಬಲ್ ಮೇಲೆ ಎನ್ನುವ ಹಾಗೆ ಆ ಕ್ಷಣಕ್ಕೆ ಉಪಯುಕ್ತವೆಂದೆನಿಸಿದ್ದೆಲ್ಲ ಆಮೇಲೆ ಓದಿದರಾಯ್ತು ಎಂದು ಡೌನ್‌ಲೋಡ್ ಮಾಡಿ ಮತ್ತೆ ಆ ಕಡೆ ಎಂದೂ ಮುಖ ಮಾಡದೇ ಡಾಕ್ಯುಮೆಂಟ್‌ಗಳ ರಾಶಿ ಡೌನ್‌ಲೋಡ್ಸ್ ಟೇಬಲ್ ಮೇಲೆ ತುಂಬಿ ತುಳುಕ್ತಾ ಇತ್ತು.

'ಡೌನ್‌ಲೋಡ್' ಹೆಸರೇ ಸೂಚಿಸುವಂತೆ ಇವುಗಳ ಲೋಡ್‌ನಿಂದ ಮೆಮೊರಿ ಡೌನ್ ಆಗುವುದಂತೂ ಖಚಿತ. ಹಾಗಾಗಿ ಡೌನ್‌ಲೋಡ್‌ಗಳೆಲ್ಲವನ್ನೂ ಡಸ್ಟ್‌ಬಿನ್‌ಗೆ ಅಪ್‌ಲೋಡ್ ಮಾಡಿದೆ.

ಇನ್ನು ವಿಡಿಯೋಸ್ ವಾರ್ಡ್‌ರೋಬ್ ಸರದಿ. ವಾರ್ಡ್‌ರೋಬ್ ಎನ್ನುವುದೇ ಒಂದು ಭಾವನಾಲೋಕ. ಅದು ಬಟ್ಟೆಯ ವಾರ್ಡ್‌ರೋಬ್ ಆಗಿದ್ದರೆ ಅಲ್ಲಿರುವ ಹರಿದುಹೋದ, ಬಣ್ಣ ಮಾಸಿದ, ಬಿಗಿಯಾದ ಉಡುಪುಗಳು ಕೂಡ ನಮಗೆ ಅಚ್ಚುಮೆಚ್ಚು. ಬಟ್ಟೆ ಹರಿದರೂ, ಮಾಸಿದರೂ ಆ ಬಟ್ಟೆಯ ಜೊತೆಗೆ ನಮ್ಮ ಬಾಂಧವ್ಯ ಹರಿಯಲಾಗದು. ಧರಿಸಲಾಗದೆ ಹೋದರೇನಂತೆ ಅದರಿಂದ ಬ್ಯಾಗ್ ಹೊಲಿಯಬಹುದು, ಪಿಲ್ಲೋ ಕವರ್ ಮಾಡಬಹುದು, ಯಾವುದಕ್ಕೂ ಸಲ್ಲದಿದ್ದರೆ ಕಾಲೊರೆಸಲು ಕಾರ್ಪೆಟ್ ಮಾಡಬಹುದು ಎಂತೆಲ್ಲ ಎಂದಿಗೂ ಸಫಲವಾಗದ, ಮತ್ತೆ ಮತ್ತೆ ಮುಂದೂಡುವ ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡಿರುವುದರಿಂದ ಅವುಗಳಿಗೆಲ್ಲ ವಾರ್ಡ್‌ರೋಬ್‌ನಿಂದ ಮುಕ್ತಿಯೇ ಸಿಗುವುದಿಲ್ಲ.

ಅಂತೆಯೇ ವಿಡಿಯೊಸ್ ವಾರ್ಡ್‌ರೋಬ್‌ನಲ್ಲಿ ಇರುವ ಒಂದೊಂದು ವಿಡಿಯೊ ಕೂಡ ನಮಗೆ ಅಚ್ಚುಮೆಚ್ಚು. ಅವುಗಳ ಹಿಂದೆ ಒಂದೊಂದು ನೆನಪಿನ ಸುರುಳಿ ಬಿಚ್ಚುತ್ತ ಹೋಗುತ್ತದೆ. ಮಕ್ಕಳು ಮಲಗಿದ್ದು, ತಿಂದಿದ್ದು, ಕುಡಿದದ್ದು, ಆಡಿದ್ದು, ಮಾತನಾಡಿದ್ದು, ನಕ್ಕಿದ್ದು, ಕಕ್ಕಿದ್ದು, ಅತ್ತಿದ್ದು, ಬಿಕ್ಕಿದ್ದು, ಕೆಮ್ಮಿದ್ದು, ಸೀನಿದ್ದು, ಆಕಳಿಸಿದ್ದು ಹೀಗೆ ಎಲ್ಲವೂ ಕೌತುಕವೆನಿಸಿ ವಿಡಿಯೊ ಮಾಡಿದ್ದೇ ಮಾಡಿದ್ದು, ಮೆಮೊರಿ ಸ್ಪೇಸ್ ತುಂಬಿದ್ದೇ ತುಂಬಿದ್ದು. ಒಂದು ವಿಡಿಯೊ ಅಕ್ಕರೆಯ ಉಮೇದು ಕೊಟ್ಟರೆ, ಇನ್ನೊಂದು ವಿಡಿಯೊ ಹೆಮ್ಮೆಯ ಹರಿವು, ಮತ್ತೊಂದು ಬಾಂಧವ್ಯದ ಘಮಲು ಸೂಸಿದರೆ, ಮಗದೊಂದು ಭಾವುಕದ ಸನ್ನಿವೇಶ. ಹೀಗೆ ಪ್ರತಿಯೊಂದು ವಿಡಿಯೊ ಹಿಂದೆ ಭಾವನೆಗಳ ಮೆರವಣಿಗೆ ಸಾಗುತ್ತಲೇ ಹೋಗುತ್ತದೆ. ಭಾವನೆಗಳನ್ನು ಡಸ್ಟ್‌ಬಿನ್‌ಗೆ ಹಾಕಲು ಸಾಧ್ಯವೇ? ಹಾಗೊಂದು ವೇಳೆ ಹಾಕಿದರೆ ನನ್ನ ಮನದ ದೇವರು ಮೆಚ್ಚಿಯಾನೆ? ಹಾಗಾಗಿ ಅವುಗಳನ್ನು ಸ್ವಚ್ಛತಾ ಅಭಿಯಾನದಿಂದ ದೂರ ಇಟ್ಟಾಯ್ತು.

ಕೊನೆಯದಾಗಿ ವಾಟ್ಸಾಪ್ ಎಂಬ ವಾರ್ಡ್‌ರೋಬ್. ಇದನ್ನು ಇಣುಕಿದಾಗ ಹಾರ್ಟ್ ಅಟ್ಯಾಕ್ ಆಗಿದ್ದರೂ ಅಚ್ಚರಿಯಿಲ್ಲ. ಅಬ್ಬಾ! ಇದನ್ನ ನೋಡಿ ನನ್ನ ಮನೆಯಲ್ಲಿ ಬೇರೆಯವರು ಸಂಸಾರ ಹೂಡಿ ನನ್ನ ಮನೆಯನ್ನು ಕಬ್ಜಾ ಮಾಡಿದ ಹಾಗೆನಿಸಿತು. ಟ್ಯಾಬ್ ಮೆಮೊರಿ ಸ್ಪೇಸನ್ನು ನುಂಗಿ ಹಾಕಿರುವ, ಬೇರೆಯವರು ಶೇರ್ ಮಾಡಿದ ರಾಶಿ ರಾಶಿ ಫೋಟೊ, ವೀಡಿಯೊ, ಆಡಿಯೊ ಕ್ಲಿಪ್ಸ್, ಲೇಖನಗಳು, ಫಾರ್ವರ್ಡೆಡ್ ಮೆಸೇಜ್‌ಗಳು ನೋಡಲು ಎರಡು ಕಣ್ಣು ಸಾಲಲಿಲ್ಲ. ಸಾಗರದ ಇನ್ನೊಂದು ತೀರ ಕಾಣಿಸದ ಹಾಗೆ ಎಷ್ಟೇ ಸ್ಕ್ರಾಲ್ ಮಾಡಿದರೂ ಕೊನೆ ಸಿಗಲೇ ಇಲ್ಲ.

ಬೆಂಗಳೂರಿನಲ್ಲಿ ಒಂದು ಸ್ಕ್ವೇರ್ ಫೀಟ್ ಜಾಗಕ್ಕೆ ಕಡಿಮೆ ಅಂದರೂ 4ರಿಂದ 5 ಸಾವಿರ ರೂಪಾಯಿ. ನೀವೇ ಹೇಳಿ, ಒಂದು ಪೈಸೆಯೂ ನನಗೆ ಕೊಡದೇ ನನ್ನ ಟ್ಯಾಬ್ ಮೆಮೊರಿ ಸ್ಪೇಸ್ ಅನ್ನು ಬೇರೆಯವರು ತಮ್ಮ ಫೋಟೊ, ವಿಡಿಯೊಗಳಿಂದ ಆಕ್ರಮಿಸುವುದು ನೋಡಿದರೆ ಹೊಟ್ಟೆ ಉರಿಯೋದಿಲ್ವಾ? ಆ ಕೋಪದಲ್ಲಿ ಎಲ್ಲಾನೂ ಎತ್ತಿ ಡಸ್ಟ್‌ಬಿನ್‌ಗೆ ಹಾಕಿದೆ ನೋಡಿ, ಒಮ್ಮಿಂದೊಮ್ಮೆಲೆ ಎಷ್ಟೊಂದು ಜಿಬಿ ಮೆಮೊರಿ ಸ್ವಚ್ಛ ಆಗಿ ಒಂದು ಅರಮನೆ ಕಟ್ಟೋ ಅಷ್ಟು ಜಾಗ ಸಿಗ್ತು.

ಅಂತೂ ಇಂತೂ ನನ್ನ ಸ್ವಚ್ಛತಾ ಕಾರ್ಯಕ್ರಮ ಹೀಗೆ ಸುಸೂತ್ರವಾಗಿ ಸಂಪನ್ನವಾಯ್ತು ನೋಡಿ. ಸ್ವಚ್ಛತಾ ಕಾರ್ಯಕ್ರಮ ಮುಗಿಸಿದ ನಂತರ ನನ್ನ ಬೆರಳುಗಳು, ಕಣ್ಣುಗಳು ಹಾಗೂ ಮೆದುಳು ದಣಿದಿದ್ದರಿಂದ ವಿಶ್ರಾಂತಿಗೆ ಮೊರೆಹೋದೆ. ■